ಶ್ರೀ ಜಿ. ದುಗ್ಗಪ್ಪ.—ಚಿತ್ರದುರ್ಗ ಜಿಲ್ಲೆಯ ಯಾವ ಯಾವ ತಾಲ್ಲೂಕುಗಳಲ್ಲಿ ಈ ಅನ್ವತ್ಕೆ ಗಳನ್ನು ಕೊಡಬೇಕೆಂದು ಪಶುಪಾಲನಾ ಡೈರೆಕ್ಟರ್ ಅವರು ರೆಕಮೆಂಡೇಷನ್ ಕಳುಹಿಸಿದ್ದಾರೆ ಯೆಂಬುದನ್ನು ಹೇಳುತ್ತೀರಾ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಇದು ಕೇವಲ ಡಸ್ಕಕೆರೆ ತಾಲ್ಲೂಕಿಗೆ ಸಂಬಂಧಪಟ್ಟ ಪ್ರಶ್ನೆ ಯಾಗಿದೆ.

Supply of Drinking Water under Rural Water Supply or National Water Supply Scheme.

*Q.—778. Sri H. D. DEVEGOWDA (Holenarasipur).—

Will the Government be pleased to state :—

(*a*) the number of villages in Holenarasipur and Channarayapatna Taluks, Hassan District, for which estimates have been prepared by Government to supply drinking water under Rural Water Supply or National Water Supply Scheme ;

(*b*) the reasons for not executing the said works though some of the Panchayats have agreed to contribute their quota ;

(*c*) the names of villages in Holenarasipur and Channarayapatna Taluks where the schemes have been prepared and the estimated cost of those schemes ;

(*d*) when they would start these schemes and complete the same early ?

A.—Sri RAMAKRISHNA HEGDE (Minister for Developments Panchayathi Raj and Co-operation).—

(*a*) Two.

(*b*) In one case, the Panchayat has not yet agreed to contribute its quota. In the other case, P.W.D. has taken up the work.

(*c*)	*Name of village and Taluk*		*Estimated cost*
	Tejur, Holenarasipur Taluk	...	Rs. 44,000
	Bagur, Channarayapatna Taluk	...	Rs. 54,000

(*d*) The scheme at Tejur will be taken up as soon as the Group Panchayat agrees to provide its quota.

P. W. D. have taken up the execution of the scheme at Bagur.

Sri RAMAKRISHNA HEGDE.—I have to add that besides these two schemes that have been approved by the Government of India, plans and estimates are ready in respect of nearly 83 schemes in Holenarasipur Taluk for drinking water wells and 12 in respect of pipe water supply and 165 in Channarayapatna Taluk in respect of deep water wells and 26 in the same taluk in respect of pipe water supply.

Mr. SPEAKER.—Has the Hon'ble Minister any objection to place it on the Table of the House ?

Sri RAMAKRISHNA HEGDE.—No. We have forwarded the schemes to the Government of India and are awaiting their approval.

ಶ್ರೀ ಎಚ್. ಡಿ. ದೇವೇಗೌಡ.—ಪಂಚಾಯ್ತಿಯವರು ಅದರ ಕೋಟಾ ಕೊಡತಕ್ಕ ಏಜಾರದಲ್ಲಿ ರೆಸಲೂಷನ್ ಮಾಡಿ ಸುಮಾರು ಒಂದೂವರೆ ವರ್ಷವಾಗಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಇಲ್ಲ, ಅವರು ರೆಸಲ್ಯೂಷನ್ ಮಾಡಿ ಕಳುಹಿಸಿದೇ ಇರುವುದೇ ನಮಗೆ ಬಂದಿರತಕ್ಕ ತೊಂದರೆ. ಆ ರೀತಿ ರೆಸಲ್ಯೂಷನ್ ಮಾಡಿ ಅದು ನಮಗೆ ಬಂದಿದ್ದರೆ ಯಾವ ತೊಂದರೆಯೂ ಕೂಡ ಇಲ್ಲ.

ಶ್ರೀ ಎಚ್. ಆರ್. ಕೇಶವಮೂರ್ತಿ.—ಬಾಗೂರಿನ ವಿಷಯ ಬಹಳ ದಿವಸವಿಂದಲೂ ಪೆಂಡಿಂಗ್ ಇದೆ ಅದನ್ನು ಎಷ್ಟು ದಿವಸದಲ್ಲಿ ಪೂರೈಸುತ್ತೀರಾ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಅದಷ್ಟು ಬೇಗ ಅಂತ ಹೇಳಬೇಕಾಗುತ್ತದೆ. ಈಗಾಗಲೇ ಸುಮಾರು ಅರ್ಧದಷ್ಟು ಎಂದರೆ 27 ಸಾವಿರ ರೂಪಾಯಿನಷ್ಟು ಖರ್ಚಾಗಿದೆ.

ಶ್ರೀ ಎಚ್. ಡಿ. ದೇವೇಗೌಡ.—ಈ ಕೆಲಸಗಳನ್ನು ಕಾರ್ಯಗತ ಮಾಡುವುದು ಯಾವಾಗ ಎಷ್ಟು ದಿವಸ ಬೇಕಾಗುತ್ತದೆ ಎಂಬುದನ್ನು ಹೇಳುತ್ತೀರಾ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಬಹುಶಃ ಮಾನ್ಯ ಸದಸ್ಯರು ಇರತಕ್ಕ ಕೊಂದರೆಯನ್ನು ಅರಿತಿಲ್ಲ. ಎಂದು ಗೊತ್ತಾಗುತ್ತದೆ. ಇದು ನಮ್ಮ ಕೈಯಲ್ಲಿ ಇಲ್ಲ. ಪ್ಲಾನ್ ಎಸ್ಟಿಮೇಟ್ ತಯಾರಾದಮೇಲೆ ಸೆಂಟ್ರಲ್ ಗವರ್ನಮೆಂಟ್‌ನವರಿಗೆ ಕಳುಹಿಸುತ್ತೇವೆ, ಅವರ ಅಪ್ರೂವಲ್ ಆದಮೇಲೆ ಅಡ್ಮಿನಿಸ್ಟ್ರೇಟಿವ್ ಸ್ಯಾಂಕ್ಷನ್ ಕೊಡುತ್ತೇವೆ, ಕೆಲಸ ಶುರುವಾಗುತ್ತದೆ. ಆದ್ದರಿಂದ ಸೆಂಟ್ರಲ್ ಗವರ್ನಮೆಂಟಿನವರಿಂದ ಬರುವವರೆಗೂ ಯಾವ ಕಾರ್ಯಕ್ರಮವನ್ನೂ ತೆಗೆದುಕೊಳ್ಳುವ ಹಾಗಿಲ್ಲ.

Nationalisation of Bus Routes in Kolar District

*Q.—801. Sri S. RAJAGOPAL (K.G.F.).—

Will the Government be pleased to state:—

(*a*) whether it is a fact that they have decided to nationalise the bus routes in Kolar District;

(*b*) if so, the reasons for the delay?

A.—Sri D. DEVARAJ URS (Minister for Labour, Housing and Transport).—

(*a*) No.

(*b*) In view of reply to clause (*a*) above, this does not arise.

Sri S. RAJAGOPAL.—May I know when this Government is going to nationalise routes in Kolar District?

Sri D. DEVARAJ URS.—I have already stated that the Government is not going to nationalise but the Corporation is going to nationalise the routes. The schemes are prepared by the Corporation and are before the Government to be heard by the Chief Minister.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಕೋಲಾರ ಜಿಲ್ಲೆಯಲ್ಲಿ ಈ ರಾಷ್ಟ್ರೀಕರಣವನ್ನು ನಾಯಿತಿಂದ ಕಜ್ಜಾಯದಂತೆ ಮಾಡಿದ್ದೀರಿ, ಇಷ್ಟು ದಿರೇ ಆಗಿದೆ, ಜಾಗ್ರತೆ ಮಾಡುವುದಕ್ಕೆ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ?

ಶ್ರೀ ಡಿ. ದೇವರಾಜ ಅರಸ್.—1964ನೇ ಆಕ್ಟೋಬರ್‌ನಲ್ಲೇ ಸ್ಕೀಮನ್ನು ತಯಾರು ಮಾಡಿ ಪಬ್ಲಿಷ್ ಮಾಡಿದ್ದೇವೆ. ಅದು ನರ್ಕಾರದ ಮುಂದೆ ಇದೆ ಎಂದು ಹೇಳಿದೆ. ಅದು ಫೈನಲೈಸ್ ಆಗಿ ಆರ್ಡರ್ ಪಾಸ್ ಮಾಡಿದ ಕೂಡಲೇ ಅದನ್ನು ತೆಗೆದುಕೊಳ್ಳಲಾಗುತ್ತದೆ.